**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 833/2022

**ಫಿರ್ಯಾದುದಾರರು** ಗ್ರಾಮಾಂತರ ಪೊಲೀಸ್ ಠಾಣೆ, ಸಾಗರ.

ವಿರುದ್ಧ

**ಆರೋಪಿತರುಃ-** ಬರದವಳ್ಳಿ ಲೋಕೇಶ ಮತ್ತು ಮತ್ತೊಬ್ಬರು.

1 ನೇ ಆರೋಪಿತನ ಹೆಸರು - ಬರದವಳ್ಳಿ ಲೋಕೇಶ.
ತಂದೆಯ ಹೆಸರು - ಶಿವರಾಜ.
ವಯಸ್ಸುಃ - 23 ವರ್ಷ,
ಉದ್ಯೋಗ - ಕಾರ್ಮಿಕ.
ವಾಸಃ - ಬರದವಳ್ಳಿ ಗ್ರಾಮ,
ಸಾಗರ ತಾಲ್ಲೂಕು, ಶಿವಮೊಗ್ಗ.

2 ನೇ ಆರೋಪಿತನ ಹೆಸರು - ಪುನೀತ್ ಕುಮಾರ್.
ತಂದೆಯ ಹೆಸರು - ಶಿವರಾಜ.
ವಯಸ್ಸು - 23 ವರ್ಷ,
ಉದ್ಯೋಗ - ಕಾರ್ಮಿಕ.
ವಾಸಃ - ಗಾಳಿಪುರ ಗ್ರಾಮ,
ಸಾಗರ ತಾಲ್ಲೂಕು, ಶಿವಮೊಗ್ಗ.

## ದೋಷಾರೋಪಣೆ

ಸಾಗರದ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ಚಾಂದಿನಿ ಜಿ.ಯು., ಬಿ.ಎ.ಎಲ್‌ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆ ಹೊರಿಸುತ್ತೇನೆ.

ದಿನಾಂಕಃ ***31.01.2022*** ರಂದು ಸಂಜೆ ***05.30*** ಗಂಟೆಯ ಸಮಯದಲ್ಲಿ ಸಾಗರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ, ಸಾಗರ ತಾಲ್ಲೂಕು ಶಿರೂರು-ಆಲಳ್ಳಿ ಗ್ರಾಮದ ಅಂಬೇಶ ರವರ ಆರ್.ಕೆ. ಹೋಟೆಲ್ ಹತ್ತಿರ ರಸ್ತೆ ಪಕ್ಕದಲ್ಲಿ ಸಾಕ್ಷಿ-***1*** ಮತ್ತು ***2*** ರವರು ಹೋಟೆಲ್ ನಲ್ಲಿ ಊಟ ಮಾಡಲು ಹೋಗುತ್ತಿದ್ದಾಗ, ***1*** ನೇ ಆರೋಪಿತನಾದ ನೀವು ಸಾಕ್ಷಿ-***1*** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ

***504*** ಸಹವಾಚಕ ಕಲಂ ***34*** ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ***1*** ನೇ ಆರೋಪಿತನಾದ ನೀವು ಸಾಕ್ಷಿ-***1*** ರವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***341*** ಸಹವಾಚಕ ಕಲಂ ***34*** ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ***1*** ನೇ ಆರೋಪಿತನಾದ ನೀವು ಸಾಕ್ಷಿ-***1*** ರವರಿಗೆ ಕಲ್ಲಿನಿಂದ ತಲೆಬಲ ಭಾಗಕ್ಕೆ ಹೊಡೆದು ರಕ್ತಗಾಯಪಡಿಸಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***324*** ಸಹವಾಚಕ ಕಲಂ ***34*** ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ***2*** ನೇ ಆರೋಪಿತನಾದ ನೀವು ಸಾಕ್ಷಿ-***1*** ರವರ ಬಟ್ಟೆ ಹಿಡಿದು ಎಳೆದಾಡಿ, ಕೈಯಿಂದ ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ ***323*** ಸಹವಾಚಕ ಕಲಂ *34* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಆದ್ದರಿಂದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದೆ.

ದಿನಾಂಕಃ 08.01.2025.

**(ಚಾಂದಿನಿ ಜಿ.ಯು.)**
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 833/2022

ಆರೋಪಿಯ ಹೇಳಿಕೆ

1 ನೇ ಆರೋಪಿಯ ಹೆಸರುಃ ಬರದವಳ್ಳಿ ಲೋಕೇಶ ತಂದೆ ರಾಜಪ್ಪ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 08.01.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

**(ಚಾಂದಿನಿ ಜಿ.ಯು.)**
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 833/2022

ಆರೋಪಿಯ ಹೇಳಿಕೆ

**2** ನೇ ಆರೋಪಿಯ ಹೆಸರುಃ ಪುನೀತ್ ಕುಮಾರ್ ತಂದೆ ಶಿವರಾಜ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 08.01.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

**(ಚಾಂದಿನಿ ಜಿ.ಯು.)**
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.